ಕಾನೂನು ಬಾಹಿರವಾಗಿ ಸದಸ್ಯತ್ವ ಮತ್ತು ನಿವೇಶನ ನೀಡಿರುವುದು

961 (1436) ಶ್ರೀ ಹೆಚ್.ಸಿ. ಬಾಲಕೃಷ್ಣ (ಮಾಗಡಿ) : ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಗೃಹ ನಿರ್ಮಾಣ ಸಹಕಾರ ಸಂಘಗಳಲ್ಲಿ ನೌಕಕರಲ್ಲದವರಿಗೆ ಸದಸ್ಯತ್ವ ಮತ್ತು ನಿವೇಶನ ನೀಡಬಾರದೆಂದು ಉಚ್ಚ ನ್ಯಾಯಾಲಯದ ಆದೇಶವಿದ್ದರೂ, ಹೊರಗಿನವರಿಗೆ ಶೇಕಡಾ 100 ರಷ್ಟು ಸದಸ್ಯತ್ವ ಮತ್ತು ನಿವೇಶನ ನೀಡಬೇಕೆಂದು ಸಹಕಾರ ಇಲಾಖೆಯಿಂದ ಸುತ್ತೋಲೆ ಹೊರಡಿಸಿರುವುದು ಸರಿಯೇ?

ಆ) ನ್ಯಾಯಾಲಯದ ತೀರ್ಪು ರೀತಿ ಇದ್ದರೂ ಸಹ ಸಾರ್ವಜನಿಕರಿಗೆ ಸದಸ್ಯತ್ವ ನೀಡಿ, ನಿವೇಶನ ನೀಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ? ಹಾಗಾದರೆ, ಇದರ ವಿರುದ್ಧ ಸರ್ಕಾರದ ಕ್ರಮವೇನು?

ಶ್ರೀ ಲಕ್ಷ್ಮಣ ಸವದಿ (ಸಹಕಾರ ಸಚಿವರು) :

ಅ) ಗೃಹ ನಿರ್ಮಾಣ ಸಹಕಾರ ಸಂಘಗಳಲ್ಲಿ ನೌಕರರಲ್ಲದವರಿಗೆ ಸದಸ್ಯತ್ವ ಮತ್ತು ನಿವೇಶನ ನೀಡಬಾರದೆಂದು ಉಚ್ಚ ನ್ಯಾಯಾಲಯದ ಆದೇಶವಿರುವುದು ಗಮನಕ್ಕೆ ಬಂದಿರುವುದಿಲ್ಲ.

ಹೊರಗಿನವರಿಗೆ ಶೇಕಡಾ 10 ರಷ್ಟು ಸದಸ್ಯತ್ವ ಮತ್ತು ನಿವೇಶನ ನೀಡಬೇಕೆಂದು ಸಹಕಾರ ಇಲಾಖೆಯಿಂದ ಯಾವುದೇ ಸುತ್ತೋಲೆಯನ್ನು ಹೊರಡಿಸಿರುವುದಿಲ್ಲ. ಆದರೆ ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ 1959ರ ಪ್ರಕರಣ 30ಬಿ ಅಡಿಯಲ್ಲಿ ದತ್ತವಾದ ಅಧಿಕಾರದನ್ವಯ ಸಹಕಾರ ಸಂಘಗಳ ನಿಬಂಧಕರಿಂದ ಗೃಹ ನಿರ್ಮಾಣ ಸಹಕಾರ ಸಂಘಗಳು ಸಂಘದ ಒಟ್ಟು ಸದಸ್ಯರ ಶೇಕಡಾ 10 ರಷ್ಟು ಮಾತ್ರ ಸಹಸದಸ್ಯರನ್ನು ನೋಂದಾಯಿಸಿಕೊಳ್ಳತಕ್ಕದ್ದು ಹಾಗೂ ನಿವೇಶನಗಳ ಹಂಚಿಕೆಯಲ್ಲಿ ಸಹಸದಸ್ಯರಿಗೆ ಶೇಕಡಾ 10 ರಷ್ಟು ಮಾತ್ರ ನಿವೇಶನ ನೀಡತಕ್ಕದ್ದು ಎಂಬುದಾಗಿ ತಮ್ಮ ಉಪವಿಧಿಗಳಲ್ಲಿ ಈ ಅಂಶಗಳನ್ನು ಅಳವಡಿಸಿಕೊಳ್ಳಲು ನಿರ್ದೇಶಿಸಲಾಗಿದೆ.

ಆ) ನ್ಯಾಯಾಲಯದ ತೀರ್ಪು ಈ ರೀತಿ ಇರುವುದು ಇಲಾಖೆಯ ಗನಕ್ಕೆ ಬಂದಿರುವುದಿಲ್ಲ. ಆದರೆ, ಗೃಹ ನಿರ್ಮಾಣ ಸಹಕಾರ ಸಂಘಗಳು ಸಮರ್ಪಕವಾಗಿ ಕಾರ್ಯನಿರ್ವಹಿಸದಿರುವ ಬಗ್ಗೆ ಹಾಗೂ ಅವುಗಳ ಸದಸ್ಯರಿಗೆ ನಿವೇಶನ ಹಂಚಿಕೆಯಲ್ಲಿ ಅನ್ಯಾಯ ಮಾಡುತ್ತಿರುವ ಬಗ್ಗೆ ಸಹಕಾರ

ಸಂಘಗಳ ಸದಸ್ಯರಿಂದ ನಿರಂತರವಾಗಿ ದೂರುಗಳು ಹಾಗೂ ಮನವಿಗಳು ಬಂದಿದ್ದರ ಹಿನ್ನೆಲೆಯಲ್ಲಿ ರಾಜ್ಯದಲ್ಲಿ ಗೃಹ ನಿರ್ಮಾಣ ಸಹಕಾರ ಸಂಘಗಳು ಸಮರ್ಪಕವಾಗಿ ಕಾರ್ಯನಿರ್ವಹಿಸುವಂತೆ ಮಾಡುವ ದೃಷ್ಟಿಯಿಂದ ಸಹಕಾರ ಸಂಘಗಳ ನಿಬಂಧಕರು ಮೇಲೆ ತಿಳಿಸಿದ ನಿರ್ದೇಶನವನ್ನು ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ 1959ರ ಪ್ರಕರಣ 30ಬಿ ಅಡಿಯಲ್ಲಿ ನೀಡುವುದು ಸೂಕ್ತವೆಂದು ಪರಿಗಣಿಸಿ ನಿರ್ದೇಶನ ನೀಡಿರುತ್ತಾರೆ.

ನೌಕರರ ಗೃಹ ನಿರ್ಮಾಣ ಸಹಕಾರ ಸಂಘಗಳಲ್ಲಿ ನೌಕರರಲ್ಲದವರಿಗೆ ಸಹಸದಸ್ಯತ್ವ ನೀಡಿ ನಿವೇಶನ ನೀಡಿರುವುದು ಸರ್ಕಾರದ ಗಮನಕ್ಕೆ ಬಂದಿರುತ್ತದೆ. ಈ ರೀತಿ ಸದಸ್ಯತ್ವ ನೀಡಲು ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ 1959ರ ಪ್ರಕರಣ 18(4)ರ ಅಡಿಯಲ್ಲಿ ಅವಕಾಶವಿರುತ್ತದೆ. ಆದರೆ, ಅಂತಹ ಸದಸ್ಯರು ಸಂಘದ ಸದಸ್ಯತ್ವ ನಡೆದ ನಂತರ ಸಂಘದ ಆಡಳಿತ ಮಂಡಳಿ ಚುನಾವಣೆಗಳಲ್ಲಿ ಮತದಾನ ಮಾಡುವ ಮತ್ತು ಆಡಳಿತ ಮಂಡಳಿ ನಿರ್ದೇಶಕರಾಗುವ ಹಕ್ಕನ್ನು ಮಾತ್ರ ಹೊಂದಿರುವುದಿಲ್ಲ. ಉಳಿದಂತೆ ಇನ್ನಿತರೆ ಎಲ್ಲಾ ಸೌಲಭ್ಯಗಳನ್ನು ಪಡೆಯಲು ಅರ್ಹತೆ ಹೊಂದಿರುತ್ತಾರೆ. ಗೃಹ ನಿರ್ಮಾಣ ಸಹಕಾರ ಸಂಘಗಳ ಸಮರ್ಪಕ ಕಾರ್ಯನಿರ್ವಹಣೆ ದೃಷ್ಟಿಯಿಂದ ನಿಬಂಧಕರು ತಮಗೆ ದತ್ತವಾದ ಅಧಿಕಾರದನ್ವಯ ಈ ಆದೇಶವನ್ನು ನೀಡಿರುತ್ತಾರೆ.

ವರ್ತುಲ ಹಾಗೂ ಸುವರ್ಣ ರಸ್ತೆ

961 (1122) ಶ್ರೀ ಬೆಳ್ಳುಳ್ಳಿ ಸಂಗಪ್ಪ ಕಲ್ಲಪ್ಪ (ಬಸವನ ಬಾಗೇವಾಡಿ) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬಸವನ ಜನ್ಮಸ್ಥಳವಾದ ಬಸವನ ಬಾಗೇವಾಡಿಯಲ್ಲಿ ವರ್ತುಲ ರಸ್ತೆ ನಿರ್ಮಿಸುವ ಬಗ್ಗೆ ಸರಕಾರಕ್ಕೆ ವರದಿ ಬಂದಿದೆಯೇ, ಹಾಗಿದ್ದಲ್ಲಿ, ಸರ್ಕಾರ ಈ ವರದಿಯ ಮೇಲೆ ಕೈಗೊಂಡ ಕ್ರಮಗಳೇನು?

ಆ) ಬಿಜಾಪುರ ರಾಷ್ಟ್ರೀಯ ಹೆದ್ದಾರಿ–218ನ್ನು ಮೇಲ್ದರ್ಜೆಗೇರಿಸಿ, ಸುವರ್ಣ ರಸ್ತೆಯಾಗಿ ನಿರ್ಮಿಸುವ ವಿಷಯ ಸರ್ಕಾರದ ಗಮನಕ್ಕೆ ಬಂದಿದೆಯೇ, ಬಂದಿದ್ದಲ್ಲಿ, ಈ ಬಗ್ಗೆ ಸರ್ಕಾರ ಕೈಗೊಂಡ ಕ್ರಮವೇನು?